ಪ್ರದರ್ಶಿಸಲಾಗುತ್ತಿದೆ.

4. ನಿರಾಶ್ರಿತರು ಸೋಮಾರಿತನವನ್ನು ತೊರೆದು ಸ್ವಯಂ ಉದ್ಯೋಗವನ್ನು ಅವಲಂಬಿಸಿ ಜೀವನವನ್ನು ನಡೆಸಲು ನಿರಾಶ್ರಿತರ ಪರಿಹಾರ ಕೇಂದ್ರದಲ್ಲಿನ ಭಿಕ್ಷುಕರಿಗೆ ವಿವಿಧ ವೃತ್ತಿಗಳಲ್ಲಿ ಅಂದರೆ ನಾರು ನೇಯ್ಗೆ ಬಟ್ಟೆ ನೇಯ್ಗೆ ಬುಕ್ ಬೈಂಡಿಂಗ್ ಬಡಗಿ, ಕಮ್ಮಾರಿಕೆ, ಹೊಲಿಗೆ ಮತ್ತು ತೋಟಗಾರಿಕೆ ವ್ಯವಸಾಯಗಳಲ್ಲಿ ತರಬೇತಿ ನೀಡಲಾಗುತ್ತಿದೆ. ಹೀಗೆ ತರಬೇತಿ ಪಡೆಯುವ ಪ್ರತಿ ನಿರಾಶ್ರಿತರಿಗೆ ದಿನಕ್ಕೆ ರೂ.5-00ರಂತೆ ದಿನಗೂಲಿ ನೀಡಲಾಗುತ್ತಿದೆ. ಅಲ್ಲದೆ ಸರ್ಕಾರ ನಿಗಧಿಗೊಳಿಸಿರುವಂತೆ ಉಚಿತ ಊಟ, ಉಪಹಾರ ಹಾಸಿಗೆ ಹೊದಿಕೆ ಮತ್ತು ಸಮವಸ್ತ್ರಗಳನ್ನು ನೀಡಲಾಗುತ್ತಿದೆ.

ದೊಡ್ಡಬಳ್ಳಾಪುರದಲ್ಲಿ ನೇಕಾರರಿಗೆ ಒದಗಿಸಿರುವ ಸೌಲಭ್ಯಗಳು.

1953(2447)

ಶ್ರೀ ವಿ.ಕೃಷ್ಣಪ್ಪ(ದೊಡ್ಡಬಳ್ಳಾಪುರ): ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೇಷ್ಮೆ ನಗರವೆಂದು ಹೆಸರು ಮಾಡಿರುವ ದೊಡ್ಡಬಳ್ಳಾಪುರ ನಗರದಲ್ಲಿ ಸರ್ಕಾರ ನೇಕಾರರಿಗೆ ಏನು ಸೌಲಭ್ಯ ಒದಗಿಸಿದೆ?

ಆ) ಈ ನಗರದಲ್ಲಿ ಸುಮಾರು 22,000 ನೇಕಾರ ಕಾರ್ಮಿಕರಿದ್ದು ಸರ್ಕಾರ ಈ ಕಾರ್ಮಿಕರಿಗೆ ಕಳೆದ 3 ವರ್ಷಗಳಿಂದ ಏನು ಅನುಕೂಲ ಮಾಡಿಕೊಟ್ಟಿದೆ?

ಶ್ರೀ ಎಂ.ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು):

ಅ) ರೇಷ್ಮೆ ನಗರವಾದ ದೊಡ್ಡಬಳ್ಳಾಪುರದಲ್ಲಿ 6 ಪ್ರಾಥಮಿಕ ವಿದ್ಯುತ್ ಮಗ್ಗ ಸಹಕಾರ ಸಂಘಗಳು ಹಾಗೂ 1 ವಿದ್ಯುತ್ ಮಗ್ಗಗಳ ಫೆಡರೇಷನ್ ಕಾರ್ಯ ನಿರ್ವಹಿಸುತ್ತಿದ್ದು ಸರ್ಕಾರವು ವಿದ್ಯುತ್ ಮಗ್ಗ ನೇಕಾರರಿಗೆ ಸಂಘಗಳ ಮುಖಾಂತರ ಈ ಕೆಳಕಾಣಿಸಿದ ಸೌಲಭ್ಯಗಳನ್ನು ಒದಗಿಸಿರುತ್ತದೆ:

1) ಸರ್ಕಾರಿ ಷೇರು ಬಂಡವಾಳ.

2) ಮಗ್ಗಪೂರ್ವ ಸೌಲಭ್ಯ.

3) ಸಾಮೂಹಿಕ ನೇಯ್ಗೆ ಕೇಂದ್ರ

4) ವಿದ್ಯುತ್ ಮಗ್ಗಗಳ ಕಾಂಪ್ಲೆಕ್ಸ್‌ಗಾಗಿ ಷೇರು ಬಂಡವಾಳ

5) ಎನ್‌ಸಿಡಿಸಿ ಯೋಜನೆಯಡಿ ರೇಷ್ಮೆ ಸಂಸ್ಕರಣ ಘಟಕ ಸ್ಥಾಪನೆ.

6) ವಿದ್ಯುತ್‌ಮಗ್ಗ ನೇಕಾರರಿಗೆ ಗುಂಪು ವಿಮಾ ಯೋಜನೆ.

ಆ) ಸರ್ಕಾರವು ಈ ನಗರದಲ್ಲಿನ ಸುಮಾರು 2[illegible],000 ನೇಕಾರರಿಗೆ ಕಳೆದ 3 ವರ್ಷಗಳಿಂದ ಹಲವಾರು ಅಭಿವೃದ್ಧಿ ಕಾರ್ಯಕ್ರಮವನ್ನು ಸಹಕಾರಿ ಸಂಘಗಳ ಮುಖಾಂತರ ಅನುಷ್ಠಾನ ಮಾಡಿರುತ್ತದೆ. ಈ ಇಲಾಖೆಯಿಂದ ಒದಗಿಸಲಾಗಿರುವ ಸೌಲಭ್ಯಗಳ ವಿವರಗಳನ್ನು ಕೆಳಕಾಣಿಸಿದೆ:

ವರ್ಷ	ಯೋಜನೆಯ ಹೆಸರು	ಸಂಘಗಳ ಸಂಖ್ಯೆ	ಮೊತ್ತ (ರೂ. ಲಕ್ಷಗಳಲ್ಲಿ)
1998-99	ಸರ್ಕಾರಿ ಷೇರು ಬಂಡವಾಳ	2	6.00
1998-99	ಸಾಮೂಹಿಕ ನೇಯ್ಗೆ ಕೇಂದ್ರ	1	7.00
1998-99	ಎನ್‌ಸಿಡಿಸಿ ಯೋಜನೆಯಡಿ ರೇಷ್ಮೆ ಸಂಸ್ಕರಣಾ ಘಟಕ ಸ್ಥಾಪನೆ (ಮಂಜೂರಾತಿ ಆಗಬೇಕಾಗಿದೆ)	1	400.50
1999-2000	ಮಗ್ಗ ಪೂರ್ವ ಸೌಲಭ್ಯ	1	3.00
	ಒಟ್ಟು:	5	496.50
2000-01	ವಿದ್ಯುತ್‌ಮಗ್ಗ ನೇಕಾರರಿಗೆ ಗುಂಪು ವಿಮಾ ಯೋಜನೆ	329 ನೇಕಾರರು	0.1316

ದೊಡ್ಡಬಳ್ಳಾಪುರ ನಗರ ಸಭೆಯಲ್ಲಿ ಕಂದಾಯ ಇಲಾಖೆಯಿಂದ ಜಮೀನು